**ಅಸಲು ದಾವಾ ನಂಃ 84/2022**
**ಪಿ.ಡಬ್ಲ್ಯೂಃ01**

**<u>ದಿನಾಂಕಃ 30.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಬಿ.ಟಿ. ಪ್ರತಿವಾದಿ ಪರ ವಕೀಲರಿಂದ</u>

ನಾನು ಮತ್ತು ಪ್ರತಿವಾದಿ ತುಂಬಾ ವರ್ಷಗಳಿಂದ ಸ್ನೇಹಿತರು ಆದ್ದರಿಂದ ಪ್ರತಿವಾದಿ ನನಗೆ ಪರಿಚಯಸ್ಥರು. ಪ್ರತಿವಾದಿಗೆ ಸೂರನಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 56/2 ರ ಜಮೀನಿನಲ್ಲಿ ಒಟ್ಟು 20 ಎಕರೆ 25 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಎರಡು ಎಕರೆ ಅಡಿಕೆ ತೋಟ ಹೊಂದಿರುತ್ತಾರೆ ಎಂದರೆ ಸರಿ. ಅಡಿಕೆ ತೋಟವು ಸುಮಾರು ವರ್ಷದಿಂದ ಫಸಲಿಗೆ ಬಂದಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು 3-4 ವರ್ಷಗಳಿಂದ ಫಸಲಿಗೆ ಬಂದಿದೆ ಎಂದು ಉತ್ತರಿಸುತ್ತಾರೆ. 2 ಎಕರೆ ಅಡಿಕೆ ತೋಟವನ್ನು ಹೊರತು ಪಡಿಸಿ ಉಳಿದ ಎಲ್ಲಾ ಜಮೀನು ನೀರಾವರಿ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರಿದು 5 ಎಕರೆ ಜಮೀನನ್ನು ಹೊರತು ಪಡಿಸಿ ಉಳಿದ ಎಲ್ಲಾ ಜಮೀನು ನೀರಾವರಿ ಜಮೀನು ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ಸ್ವಂತ ಟ್ರಾಕ್ಟರನ್ನು ಹೊಂದಿ ಬೇಸಾಯವನ್ನು ಮಾಡುತ್ತಿದ್ದಾರೆ ಎಂದರೆ ಸರಿ.

ನಾನು ಪ್ರತಿವಾದಿಯ 10 ಎಕರೆ ಜಮೀನಿನಲ್ಲಿ ಕೋರಿ ಕೆಲಸ ಮಾಡುತ್ತಿದ್ದೆ ಎಂದರೆ ಸುಳ್ಳು. ನಾನು ಮತ್ತು ಪ್ರತಿವಾದಿ ಒಟ್ಟಾಗಿ ಸದರಿ 10 ಎಕರೆ ಜಮೀನಿನಲ್ಲಿ ಕೋರಿ ಕೆಲಸ ಮಾಡುತ್ತಿದ್ದು ಸಮಪಾಲನ್ನು ಪಡೆಯುತ್ತಿದ್ದೆವು. ಪ್ರತಿವಾದಿಯು ಜಮೀನಿನ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಮತ್ತು ನಾನು ಬೀಜ ಮತ್ತು ಗೊಬ್ಬರದ ಖರ್ಚನ್ನು ಬಿರಿಸುತ್ತಿದ್ದೆ ಎಂದರೆ ಸುಳ್ಳು. ನಾನು ಮತ್ತು ಪ್ರತಿವಾದಿಯು 10 ಎಕರೆ ಜಮೀನಿನಲ್ಲಿ ಅಂದಾಜು 7-8 ವರ್ಷಗಳಿಂದ ಒಟ್ಟಾಗಿ ಉಳುಮೆ ಕೆಲಸ ಮಾಡುತ್ತಿದ್ದೇವೆ. ನನಗೆ ಸದರಿ 10 ಎಕರೆ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ನಾನು ಪ್ರತಿವಾದಿಯವರೊಂದಿಗೆ ಕೇವಲ ಜಮೀನಿನ ಕೆಲಸವನ್ನು ಮಾಡುತ್ತಿದ್ದೆ. ಸದರಿ ಜಮೀನಿನ ಕೆಲಸದಲ್ಲಿ ಲಾಭವನ್ನು ಸಮಪಾಲು ಮಾಡಿಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿಯು ಸದರಿ ಕೆಲಸದಲ್ಲಿ ಲುಕ್ಸಾನು ಉಂಟಾಗುತ್ತಿತ್ತು ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿಯ ಜಮೀನಿನಲ್ಲಿ ಬೇಸಾಯವನ್ನು ಮಾಡಲು ಕಳೆದ ಒಂದು ವರ್ಷದಿಂದ ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರಿದು ಪ್ರತಿವಾದಿಯು ಸದರಿಯವರ ಅಳಿಯ ಬೈಯ್ಯುತ್ತಾರೆ ಎಂದು ನುಡಿದ ಮೇರೆಗೆ ನಾನು ಪ್ರತಿವಾದಿಯ ಜಮೀನಿನಲ್ಲಿ ಬೇಸಾಯ

ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗೆ ಜಮೀನಿನ ಬೇಸಾಯದಲ್ಲಿ ಬಂದಂತಹ ಯಾವುದೇ ಲಾಭಾಂಶವನ್ನು ನೀಡದೇ ಇರುವ ಕಾರಣ ಪ್ರತಿವಾದಿಯು ನನಗೆ ಜಮೀನನ್ನು ಬೇಸಾಯ ಮಾಡಲು ನೀಡಿರುವುದಿಲ್ಲ ಎಂದರೆ ಸುಳ್ಳು. ಸದರಿ ವಿಚಾರವಾಗಿ ನನಗೂ ಮತ್ತು ಪ್ರತಿವಾದಿಗೂ ವೈಮನಸ್ಸು ಬಂದಿರುತ್ತದೆ ಎಂದರೆ ಸುಳ್ಳು.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.